2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ102/2016

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಯಶೋಧ | ಪಿಡಬ್ಲ್ಯೂ- 7 |
| ಗಂಡನ ಹೆಸರು | - | ಸುದರ್ಶನ | ಸಿಡಬ್ಲ್ಯೂ - 10 |
| ವಯಸ್ಸು | - | 40 ವರ್ಷ | |
| ಉದ್ಯೋಗ | - | ಶಿಕ್ಷಕಿ | |
| ವಾಸ ಸ್ಥಳ | - | ಚಿಕ್ಕಮಗಳೂರು . | |

ದಿನಾಂಕಃ 27-07-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನಾನು ಈ ಮೊದಲು ನೋಡಿದ್ದೇನೆ. ಅನಿತಾರವರು 1 ನೇ ಆರೋಪಿಯ ಹೆಂಡತಿ. 2 ನೇ ಆರೋಪಿ ಅನಿತಾಳ ಅತ್ತೆ. ಚಾಸಾ.1 ವನಜಾಕ್ಷಿರವರು ನನಗೆ ಗೊತ್ತಿಲ್ಲ.
2. ರುದ್ರಪ್ಪ ಮತ್ತು ಯಶೋಧಮ್ಮರವರ ಬಾಡಿಗೆಯ ಮನೆಯಲ್ಲಿ 1 ನೇ ಆರೋಪಿ ಮತ್ತು ಅನಿತಾರವರು ಇಬ್ಬರು ಮಾತ್ರ ವಾಸವಾಗಿದ್ದರು. 2 ನೇ ಆರೋಪಿಯು ತನ್ನ ಇನ್ನೊಬ್ಬರು ಮಗನೊಂದಿಗೆ ವಾಸವಾಗಿದ್ದರು. 1 ನೇ ಆರೋಪಿಗೆ ಕುಡಿಯುವಂತಹ ಯಾವುದೇ ಚಟ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ನೋಡಿದಂತೆ 1 ನೇ ಆರೋಪಿ ಮತ್ತು ಅನಿತಾರವರು ಚೆನ್ನಾಗಿದ್ದರು. ಅವರ ಮಧ್ಯೆ ಗಲಾಟೆಯಾಗಿದ್ದನ್ನು ನಾನು ನೋಡಿಲ್ಲ.
3. 1 ನೇ ಆರೋಪಿಯು ಅನಿತಾ ಅಡುಗೆ ಸರಿಯಾಗಿ ಮಾಡುವುದಿಲ್ಲ ಎಂದು ಗಲಾಟೆ ಮಾಡಿರುವುದನ್ನು ಮತ್ತು ಆಕೆಗೆ ಹೊಡೆದುಬಡಿದು ಹಿಂಸೆ ಮಾಡಿರುವುದನ್ನು ನಾನು ನೋಡಿಲ್ಲ. ಮತ್ತು ಆರೋಪಿತರು ವರದಕ್ಷಿಣೆಯ ವಿಚಾರವಾಗಿ ಅನಿತಾಳಿಗೆ ಹಿಂಸೆ ಕೊಟ್ಟಿರುವುದು ನನಗೆ ಗೊತ್ತಿಲ್ಲ. 1 ನೇ ಆರೋಪಿಯು ತನ್ನ ವಾಹನ ರಿಪೇರಿಯ ಸಲುವಾಗಿ ವರದಕ್ಷಿಣೆ ತರುವಂತೆ ಅನಿತಾಳಿಗೆ ಹಿಂಸೆ ನೀಡಿರುವುದು ನನಗೆ ಗೊತ್ತಿಲ್ಲ.

4. ಅನಿತಾಳು ಗರ್ಭಿಣಿಯಾಗಿದ್ದ ವಿಚಾರ ನನಗೆ ಗೊತ್ತಿದೆ. ವರದಕ್ಷಿಣೆಯ ಮತ್ತು ಅಡುಗೆ ವಿಚಾರವಾಗಿ ಆರೋಪಿತರು ಅನಿತಾಳಿಗೆ ಹಲ್ಲೆ ಮಾಡಿದ ವಿಚಾರ ಮತ್ತು ಕಾಲಿನಿಂದ ಅನಿತಾಳ ಹೊಟ್ಟೆಯ ಮೇಲೆ ಒದ್ದ ವಿಚಾರ ನನಗೆ ಗೊತ್ತಿಲ್ಲ. ಮತ್ತು ಅದರಿಂದ ಆಕೆಗೆ ಗರ್ಭಪಾತವಾಗಿ ನಂತರ ತೀವ್ರ ರಕ್ತಸ್ರಾವದಿಂದ ಆಕೆ ಮೃತಪಟ್ಟ ವಿಚಾರ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಅನಿತಾ ಚೆನ್ನಾಗಿದ್ದರು ಆಕೆಯು ಸುಸ್ತಾಗಿ ಆಸ್ಪತ್ರೆಗೆ ಸೇರಿದ ವಿಚಾರ ಗೊತ್ತಿದೆ. ನಂತರ ಬೆಂಗಳೂರಿನಲ್ಲಿ ತೀರಿಕೊಂಡ ವಿಚಾರ ತಿಳಿದು ಬಂದಿದೆ. ಆರೋಪಿತರು ಅನಿತಾರವರನ್ನು ಮತ್ತು ಆಕೆಯ ಮಗುವನ್ನು ಸಾಯಿಸಿದ ವಿಚಾರ ನನಗೆ ಗೊತ್ತಿಲ್ಲ. ಘಟನೆಯ ಬಗ್ಗೆ ಏನು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಮಾನ್ಯ ಅಭಿಯೋಜಕರಿಂದ:-</u>

5. ಆರೋಪಿ ಸಂತೋಷನು ಮತ್ತು ಆತನ ತಾಯಿ ಕುಡಿದುಕೊಂಡು ಬಂದು ಅನಿತಾಳಿಗೆ ನಿನಗೆ ಸರಿಯಾಗಿ ಅಡಿಗೆ ಮಾಡಲು ಬರುವುದಿಲ್ಲ, ನೀನು ನೋಡಿದರೆ ಲಿಂಗಾಯಿತ ಜಾತಿಗೆ ಸೇರಿದವಳು, ನಿನಗೆ ನಾನ್ ವೆಜ್ ಮಾಡಲು ಸರಿಯಾಗಿ ಬರುವುದಿಲ್ಲ ಎಂದು ಅನಿತಾಳಿಗೆ ಅವಾಚ್ಯವಾಗಿ ಬೈಯುತ್ತಿದ್ದರು ಎನ್ನುವುದು ಸುಳ್ಳು . ನಂತರ ನೀನು ಎಂತಹ ಹೆಂಗಸು, ಬೇರೆ ಯಾರಾನ್ನಾದರೂ ಮದುವೆಯಾಗಿದ್ದರೆ ಕೈ ತುಂಬಾ ವರದಕ್ಷಿಣೆ ಕೊಡುತ್ತಿದ್ದರು, ನಾನು ಸುಖವಾಗಿ ಇರುತ್ತಿದ್ದೆ, ನನ್ನ ತಾಯಿ ಬೇರೆಯವರ ಮನೆ ಕೆಲಸಕ್ಕೆ ಹೋಗಿ ದುಡಿಯುವಂತಹ ಪರಿಸ್ಥಿತಿ

ಬರುತ್ತಿರಲಿಲ್ಲ ಎಂದು ಗಲಾಟೆ ಮಾಡುತ್ತಿದ್ದರು ಎನ್ನುವುದು ಸುಳ್ಳು . ನಾನು ಈ ವಿಚಾರವಾಗಿ ಸಂತೋಷ ಮತ್ತು ಸಾವಿತ್ರಮ್ಮನಿಗೆ ಬುದ್ಧಿ ಹೇಳಿದ್ದೆ ಎನ್ನುವುದು ಸುಳ್ಳು . ಅನಿತಾ ಗರ್ಭಿಣಿಯಾಗಿದ್ದಾಗ ದಿಃ 24-02-2016 ರಂದು ಸಂಜೆ 6.00 ಗಂಟೆಯಲ್ಲಿ ಆರೋಪಿತರಿಬ್ಬರು ಕುಡಿದುಕೊಂಡು ಅನಿತಾಳೊಂದಿಗೆ ಜೋರಾಗಿ ಬಾಯಿ ಮಾಡುತ್ತಿದ್ದ ಶಬ್ಧ ಕೇಳಿ ಬಂದು ನಾನು ನೋಡಲು ಹೋಗಿದ್ದೇನೆ ಎನ್ನುವುದು ಸುಳ್ಳು.

6. ಆಗ ಆರೋಪಿತರಿಬ್ಬರು ಅನಿತಾಳಿಗೆ ನೀನು ಲಿಂಗಾಯಿತ ಜಾತಿಗೆ ಸೇರಿದವಳು, ನಿನಗೆ ನಾನ್ ವೆಜ್ ಮಾಡಲು ಸರಿಯಾಗಿ ಬರುವುದಿಲ್ಲ ಎಂದು ಪಾನಮತ್ತರಾಗಿ ಬೈದು ಸಂತೋಷನು ಏಕಾಏಕಿ ಕೈಗಳಿಂದ ಅನಿತಾಳ ಮೈಕೈಗೆ ಹೊಡೆದನು ಎನ್ನುವುದು ಸುಳ್ಳು . ಪುನಃ ಕಾಲಿನಿಂದ ಗರ್ಭಿಣಿಯಾಗಿದ್ದ ಅನಿತಾಳ ಹೊಟ್ಟೆಗೆ ಒದ್ದನು ಎನ್ನುವುದು ಸುಳ್ಳು . ಆಗ ಅನಿತಾಳು ಅಯ್ಯೋ ಅಮ್ಮ ಎಂದು ಕೂಗಿದಳು ಎನ್ನುವುದು ಸುಳ್ಳು . ನಾನು ಹೋಗಿ ಸಂತೋಷ ಮತ್ತು ಸಾವಿತ್ರಮ್ಮಳಿಗೆ ಬುದ್ಧಿವಾದ ಹೇಳಿ ಬಂದಿದ್ದೇನೆ ಎನ್ನುವುದು ಸುಳ್ಳು.

7. ಅನಿತಾಳಿಗೆ ಸಂತೋಷನು ಕೈಯಿಂದ ಮತ್ತು ಕಾಲಿನಿಂದ ಹೊಟ್ಟೆಗೆ ಒದ್ದಿದ್ದರಿಂದ ಅನಿತಾಳ ಹೊಟ್ಟೆಯಲ್ಲಿರುವ ಮಗುವಿಗೆ ಪೆಟ್ಟಾಗಿ ಆಕೆಗೆ ಬ್ಲಿಡಿಂಗ್ ಆಗುತ್ತಿದ್ದರಿಂದ ಅವಳನ್ನು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ್ದಾರೆ ಎನ್ನುವುದು ಸುಳ್ಳು . ಅಲ್ಲಿ ಅನಿತಾಳ ಹೊಟ್ಟೆಯಲ್ಲಿ ಸತ್ತು ಹೋಗಿದ್ದ 6 ವರೆ ತಿಂಗಳ ಮಗುವನ್ನು ವೈದ್ಯರು ಹೆರಿಗೆ ಮಾಡಿಸಿ ತೆಗೆದು ರಕ್ತಸ್ರಾವ ಕಡಿಮೆ ಆಗದಿದ್ದ ಕಾರಣ ಹಾಸನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಯೂ ಚಿಕಿತ್ಸೆ ನೀಡಲು

ಆಗದೇ ನಂತರ ವಿಕ್ಟೋರಿಯ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅನಿತಾ ತೀರಿಕೊಂಡಿದ್ದಾಳೆಂದು ತಿಳಿದು ಬಂದಿದೆ ಎನ್ನುವುದು ಸುಳ್ಳು . ಅನಿತಾಳು ಆರೋಪಿತರು ಮದ್ಯಪಾನ ಮಾಡಿ ವರದಕ್ಷಿಣೆ ತರುವಂತೆ ಹಿಂಸೆ ನೀಡಿ ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ 1 ನೇ ಆರೋಪಿ ಕೈ ಮತ್ತು ಕಾಲಿನಿಂದ ಅನಿತಾಳ ಹೊಟ್ಟೆಗೆ ಮತ್ತು ಮೈಕೈಗೆ ಬಲವಾಗಿ ಹೊಡೆದು ಕೊಲೆ ಮಾಡಿದ್ದಾನೆ ಎನ್ನುವುದು ಸುಳ್ಳು. ಈ ಬಗ್ಗೆ ನಾನು ಪೊಲೀಸರಿಗೆ ಈಗ ಓದಿ ಹೇಳಿದ ನಿಶಾನೆ ಪಿ.14 ರಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸುಳ್ಳು. ನನಗೆ ನಿಶಾನೆ ಪಿ.14 ರ ವಿಷಯಗಳು ಸಂಪೂರ್ಣವಾಗಿ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

ಪಾಟೀ ಸವಾಲು ಶ್ರೀ ಕೆ.ವಿ.ವೈ. ವಕೀಲರಿಂದ – ಆರೋಪಿತನ ಪರವಾಗಿ

ಇಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಕೆ.ಎಲ್. ಅಶೋಕ್)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ರೂಃ

ಎಸ್.ಸಿ.ಸಂಖ್ಯೆ:102/2016
ಪಿ.ಡಬ್ಲ್ಯೂ:- 7